ಶ್ರೀ ಎಚ್. ಎಂ. ಚೆನ್ನಬಸಪ್ಪ.—ಈ ಸೇತುವೆಯ ಕೆಲಸದ ಬಗ್ಗೆ ಟೆಂಡರ್ ಕಾಲಿಫರ್ ಮಾಡಿ, ಅದರ ಒಂದು ಆಧಾರದ ಮೇಲೆ ಇವರಿಗೆ ಕೆಲಸ ಕೊಟ್ಟಿರುವುದು. Tenders were invited for the third time in 1971. Out of five tenders the lumpsum tender of Messrs. Gammons India based upon their own alternative design was accepted and orders to start the work was given in 1972. The presumption of the hon. Member therefore is not correct. This being the work on the national highway all the tenders will be approved by Government of India.

ಶ್ರೀ ಸಿ. ಬೈರೇಗೌಡ —ಈಗಿನ ಅಗ್ರಿಮೆಂಟ್ ಪ್ರಕಾರ ಈ ಕೆಲಸ ಯಾವ ಅವಧಿಯಲ್ಲಿ ಮುಗಿಯಬೇಕಾಗಿತ್ತೋ ಆ ಅವಧಿಯಲ್ಲಿ ಮುಗಿಯುತ್ತದೆಯೇ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ತಾ: 5-11-1975ಕ್ಕೇ ಈ ಕೆಲಸ ಮುಗಿಯಬೇಕಾಗಿತ್ತು. ಆದರೆ ಕೆಲವು ಕಾರಣಗಳಿಂದ ಈ ಕೆಲಸ ಇನ್ನೂ ಮುಗಿದಿಲ್ಲ.

ಶ್ರೀ ಕಾಗೋಡು ತಿಮ್ಮಪ್ಪ.—ಆ ಕಾರಣಗಳು ಯಾವುವು?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ಕೆಲವು ಅನಿರೀಕ್ಷಿತ ತೊಂದರೆಗಳು ಬಂದಿವೆ. ಅಡಿಪಾಯದ ಮಟ್ಟದಲ್ಲಿ ಕಲ್ಲು ಸಿಕ್ಕಿದೆ. ಆ ಕಲ್ಲನ್ನೆಲ್ಲಾ ತೆಗೆದು ಒಂದು ಮಟ್ಟ ಮಾಡಲು ಸಾಧಾರಣ ಮಾರ್ಗಗಳಿಂದ ಸಾಧ್ಯವಾಗುತ್ತಿಲ್ಲ; ಅದಕ್ಕೆ ಹೊಸ ವಿಧಾನವನ್ನು ಅನುಸರಿಸಬೇಕಾಗಿರುವುದರಿಂದ ಕೆಲಸ ನಿಧಾನವಾಗಿದೆ. So the workers should work under great pressure of air and all waters have to be driven out. They will be working in an abnormal atmosphere.

ಶ್ರೀ ವಿ. ಎಂ. ಘಾಡಿ.—ಮೆನರ್ಸ್ ಗಾಮನ್ ಇಂಡಿಯಾ (ಪಿ) ಲಿಮಿಟೆಡ್‌ನವರು ಈ ಕೆಲಸವನ್ನು ಪೂರ್ತಿ ಮಾಡುತ್ತಾರೆಂಬ ಖಚಿತ ವಿಶ್ವಾಸ ತಮಗೆ ಇದೆಯೇ ?

ಶ್ರೀ ಎಚ್. ಎಂ. ಚೆನ್ನಬಸಪ್ಪ.—ನಮಗೆ ಅವರು ಪೂರ್ತಿ ಮಾಡುತ್ತಾರೆಂಬ ಖಚಿತ ವಿಶ್ವಾಸ ಏದೆ.

Selection grade to Primary school Teachers

864. SRI V. M. GHADI (Haliyal).—Will the Minister for Education be pleased to state :—

(*a*) whether it is a fact that non-S. S. C. trained primary School teachers of Bombay Karnataka areas had been given selection grade at 15 percent even after States Re-organisation *i. e.*, from 1st April 1957 to 6th January 1959 as per Government Order dated 12th March 1962 ;

(*b*) whether it is not a fact the Government Order date 12th March 1962 No. ED 163 PMS 59 covers this issue ;

(*c*) whether it is a fact that while replying to question No. 14 on the subject on 27th August 1973, Minister had stated that the matter would be condsidered ;

(*d*) is it a fact that the matter has been represented repeatedly by the legislators

(*e*) whether the aggrieved teachers had also represnted in the matter to the authorities ;

(*f*) if so, the action taken by Government in the matter ?

SRI M. MALLIKARJUNASWAMY (Minister for Education),—

(*a*) Yes.

(*b*) Yes upto 6th January 1959.

(*c*) Yes.

(*d*) Yes.

(*e*) Yes.

(*f*) Government are examining whether, prior to 6th January 1959, the eligible trained teachers have been granted Selection grade to make up the 15% of the Cadre Strength under Rule 14 (a) of the Bombay Grant-in-Aid Code.

ಶ್ರೀ ವಿ. ಎಂ. ಘಾಡಿ.—ಇಲ್ಲಿ ನನ್ನ ಎಲ್ಲ ಪ್ರಶ್ನೆಗಳಿಗೂ ಉತ್ತರವಾಗಿ 'ನಿಜ' ಎಂದು ಹೇಳಿದ್ದೀರಿ. ಮತ್ತು ನನ್ನ ಕೊನೆಯ ಪ್ರಶ್ನೆಗೆ ಉತ್ತರವಾಗಿ ಈ ವಿಷಯವನ್ನು ಸರ್ಕಾರದವರು ಪರಿಶೀಲಿಸುತ್ತಿದ್ದಾರೆಂದು ಹೇಳಿದ್ದೀರಿ. ಅಂದರೆ ಇದನ್ನು ಪರಿಶೀಲನೆ ಮಾಡಲು ಇನ್ನು ಎಷ್ಟು ಸಮಯ ಬೇಕಾಗುತ್ತದೆ ?

† ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಇದು ಈಗಾಗಲೇ ಪರಿಶೀಲನೆಗೆ ಒಳಪಟ್ಟಿದೆ. ಮತ್ತು (ಅ) ಪ್ರಶ್ನೆಗೆ ಉತ್ತರವಾಗಿ ನಿಜ' ಮತ್ತು ದಿನಾಂಕ 6ನೇ ಜನವರಿ 1959 ರವರೆಗೆ ಎಂದು ಹೇಳಲಾಗಿದೆ. ಇಲ್ಲಿ ಕೇಡರ್ ಸ್ಟ್ರೆಂತ್ ತೆಗೆದುಕೊಂಡು ಅದರಲ್ಲಿ ಶೇಕಡಾ 15 ರಷ್ಟು ಪ್ರಮಾಣದಲ್ಲಿ ಇವರಿಗೆ ಕೊಡತಕ್ಕದ್ದನ್ನು ಕೊಡಲೇ ಬೇಕು. ಅದನ್ನು ಕೊಡುತ್ತೇವೆ. ಈ ಬಗ್ಗೆ ನಾವು ಆ ಏರಿಯಾದ ಅಧಿಕಾರಿಗಳಿಂದ ವಿಷಯಗಳನ್ನು ತರಿಸಿಕೊಂಡಿದ್ದೇವೆ.

ಶ್ರೀ ವಿ. ಎಂ. ಘಾಡಿ.—ಈ ವಿಚಾರದಲ್ಲಿ ನಾವು ಅನೇಕ ಬಾರಿ ಮನವಿಗಳನ್ನು ತಮಗೆ ಸಲ್ಲಿಸಿದ್ದೇವೆ. ಆದರೆ ಅನ್ನೂ ಈ ಕೆಲಸವಾಗಿಲ್ಲ ; ದಯಮಾಡಿ ಬೇಗನೆ ಈ ಕೆಲಸ ಮಾಡುತ್ತೀರಾ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—15 ಪರ್ಸೆಂಟ್ ಪೂರ್ತಿಯಾಗದಿದ್ದರೆ, ಅದನ್ನು ಮಾಡಲೇ ಬೇಕಾಗುತ್ತದೆ.

ಶ್ರೀ ವಿ. ಎಂ. ಘಾಡಿ.—ಅದು ಪೂರ್ತಿಯಾಗಿಯೇ ಅಥವಾ ಇನ್ನೂ ಇಲ್ಲವೇ ?

ಶ್ರೀ ಎಂ. ಮಲ್ಲಿಕಾರ್ಜುನಸ್ವಾಮಿ.—ಹಿಂದೆ ಮುಂಬೈ ಕರ್ನಾಟಕದಲ್ಲಿ ಸ್ಕೂಲ್‌ಬೋರ್ಡ್ ಅಧ್ಯಕ್ಷರುಗಳು ಮತ್ತು ಅಡ್ಮಿನಿಸ್ಟ್ರೇಟಿವ್ ಆಫೀಸರ್‌ಗಳು ಎನಿದ್ದರು, ಅವರುಗಳು ಎಸ್. ಎಸ್. ಸಿ. ನಾನ್-ಟ್ರೈನ್ಡ್ ಟೀಚರ್ಸ್‌ಗೆ 1959ನೇ ಇಸವಿಯವರೆಗೆ ಸೆಲೆಕ್ಷನ್ ಗ್ರೇಡನ್ನು ಕೊಡಬೇಕೆಂದು ಒಂದು ತೀರ್ಮಾನ ತೆಗೆದುಕೊಂಡು, ಅದನ್ನು ರೆಟ್ರಾಸ್‌ಪೆಕ್ಟೀವ್ ಎಫೆಕ್ಟ್‌ನಿಂದ ಕೊಡಬೇಕೆಂದು ಹೇಳಿದರು. 1957ರಲ್ಲಿ ಮತ್ತು 1961ರಲ್ಲಿ ಪೇ-ಸ್ಕೇರ್ಸ್ ರಿವೈಜ್ ಆಯಿತು. ಆ ರೀತಿ ರಿವೈಜ್ ಆದ ಸಂದರ್ಭದಲ್ಲಿ, ಟ್ರೈನ್ಡ್ ಇರಲಿ, ನಾನ್-ಟ್ರೈನ್ಡ್ ಇರಲಿ ಎಲ್ಲರಿಗೂ ಯೂನಿಫಾರಮ್ ಪೇ-ಸ್ಕೇಲನ್ನು ಕೊಡುವುದು ಅಕ್ರಮವಾಗುತ್ತದೆಂದು ಕೊಡಲಿಲ್ಲ. ಆ ಸಂದರ್ಭದಲ್ಲಿ ಸರ್ಕಾರಕ್ಕೆ ಅನೇಕ ಮನವಿಗಳು ಬಂದವು. ಮತ್ತೆ 1959ನೇ ಇಸವಿಯವರೆಗೆ ನಾನ್‌ಟ್ರೈನ್ಡ್ ಎಸ್.ಎಸ್.ಸಿ. ಟೀಚರ್ಸ್‌ಗೂ ಸೆಲೆಕ್ಷನ್ ಗ್ರೇಡನ್ನು 15 ಪರ್ಸೆಂಟ್‌ವರೆಗೆ ಕೊಡಬೇಕೆಂದು ಇದೆ. ಅದರಂತೆ ಕೊಡಬೇಕೆಂಬುದೇ ಸರ್ಕಾರದ ತೀರ್ಮಾನವಾಗಿದೆ.

ಅಧ್ಯಕ್ಷರು.—ಇಲ್ಲಿಗೆ ಪ್ರಶ್ನೆಗಳು ಮುಗಿದವು.